ದಿಃ 05.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ ವಿ. ಎನ್ ರವರಿಂದ**

ನನ್ನ ಜಮೀನಿನ ಸರ್ವೆ ನಂ. 191 ಇರುತ್ತದೆ. ಅದರ ಚೆಕ್ಕು ಬಂದಿ ಪೂ– ವೆಂಕಟರಾಯಪ್ಪ ರವರ ಸ್ವತ್ತು, ಪ– ನಾರಾಯಣಪ್ಪರವರ ಸ್ವತ್ತು, ಉ–ಅಶ್ವತ್ಥಪ್ಪ ಸ್ವತ್ತು, ದ– ನಂಜಪ್ಪ ರವರ ಸ್ವತ್ತು ಇರುತ್ತದೆ. ದಾವಾ ಸ್ವತ್ತಿನ ಸ. ನಂ. 76 ಇರುತ್ತದೆ. ಸ. ನಂ. 176 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರಲ್ಲಿ ಎಷ್ಟು ಪೋಡುಗಳಿವೆ ಗೊತ್ತಿಲ್ಲ. ಸ.ನಂ. 176 ರಲ್ಲಿ ಯಾರ್ಯಾರು ಸ್ವಾಧೀನದಲ್ಲಿ ಇದ್ದಾರೆ ಹೇಳಲಾಗುವುದಿಲ್ಲ.

2. ದಾವಾ ಸ್ವತ್ತು ವೆಂಕಟರಾಮಪ್ಪ ರವರಿಗೆ ವಿಭಾಗದ ಮುಖಾಂತರ ಬಂದಿರುತ್ತದೆ. ಜಮೀನನ್ನು ಖರೀದಿಸುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸ.ನಂ. 176 ಮೊದಲು ಯಲ್ಲಪ್ಪ ಎಂಬುವವರಿಗೆ ಸೇರಿದ್ದು ಎಂದರೆ ಸರಿ. ಯಲ್ಲಪ್ಪ ಎಂಬುವವರು 2 ನೇ ಪ್ರತಿವಾದಿ ಮತ್ತು ನಂಜಿಗ ಎಂಬುವವರಿಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಆವಾಗಿನಿಂದ 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

3. ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸಲು ವಾದಿ ಮತ್ತು ವೆಂಕಟರಾಮಪ್ಪ ಇವರು ದಾಖಲೆಗಳನ್ನು ಸೃಷ್ಠಿ ಮಾಡಿದ್ದಾರೆ ಎಂರದೆ ಸರಿಯಲ್ಲ. ವೆಂಕಟರಾಮಪ್ಪ ರವರು 20 ವರ್ಷಗಳಿಂದ ನಮ್ಮ ಗ್ರಾಮದಲ್ಲಿ ಇಲ್ಲ. ಅವರು ಆಂಧ್ರ ಪ್ರದೇಶದಲ್ಲಿ ಇದ್ದಾರೆ ಎಂದರೆ ಸರಿ. 20 ವರ್ಷಗಳಿಂದ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ ಜೆ. ಎನ್. ಎನ್ ರವರಿಂದ**

ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವೆಂಕಟರಾಮಪ್ಪ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ